

# ಸತ್ಯವನ್ನೇ ನುಡಿದಿದ್ದೇನೆ

■ ಕೆ. ಲೀಲಾ ಶ್ರೀನಿವಾಸ್
ಕಲೆ: ಸಂತೋಷ ಸಸಿಹಿತ್ಲು

ಸ್ವಾಮಿ ಪ್ರೇಮಮಯಿ ಅಪಾರ ಮಹಿಮಾಪುರುಷರು, ದಯಾಶೀಲರು. ತಮ್ಮ ಪಾಠ, ಪ್ರವಚನ, ಹೋಮ ಹವನಗಳಿಂದ ಅಸಂಖ್ಯ ಭಕ್ತಗಣ, ಶಿಷ್ಯರನ್ನು ಗಳಿಸಿದ್ದರು. ಒಂದು ದಿನ ಸ್ವಾಮೀಜಿಗಳು ಆಶ್ರಮದ ಹೊರಬದಿಯ ಬಂಡೆಯೊಂದರ ಮೇಲೆ ದೇವರನ್ನು ಧ್ಯಾನಿಸುತ್ತಾ ಕುಳಿತಿದ್ದರು. ಅವರ ಆಪ್ತ ಶಿಷ್ಯನೋರ್ವ ಅವರೆದುರು ಕುಳಿತು ಯೋಗ ಮಾಡುತ್ತಿದ್ದ. ಅದೇ ವೇಳೆಗೆ ಯಾರೋ ಆ ದಿಕ್ಕಿನಲ್ಲಿಯೇ ಓಡೋಡಿ ಬಂದಂತಾಯಿತು. ನೋಡಿದರೆ ಒಬ್ಬ ವ್ಯಾಪಾರಿ ಇವರೆಡೆಗೇ ಭಯಭೀತನಾಗಿ ದಾಪುಗಾಲಿಟ್ಟು ಬರುತ್ತಿದ್ದ. ಹತ್ತಿರ ಬಂದವನೇ ಸ್ವಾಮೀಜಿಗಳ ಪಾದ ಹಿಡಿದುಕೊಂಡ. ಅನಿರೀಕ್ಷಿತ ಆಘಾತದಿಂದ ಪ್ರಣವಾನಂದರು ಕಣ್ತೆರೆದು ನೋಡಿದರು. ಆ ವ್ಯಾಪಾರಿ ವಿನೀತನಾಗಿ ನುಡಿದ.

‘ಸ್ವಾಮಿಗಳೇ, ನಾನು ಕಾಶಿಯಾತ್ರೆಗೆ ಹೊರಟಿದ್ದೆ. ದಾರಿಯಲ್ಲಿ 3 ಜನ ಕಳ್ಳರು ನನ್ನಲ್ಲಿನ ಹಣ ದೋಚಲು ಅಟ್ಟಿಸಿಕೊಂಡು ಬರುತ್ತಿದ್ದಾರೆ. ದಯವಿಟ್ಟು ನನ್ನನ್ನು ರಕ್ಷಿಸಿ’.

ಸ್ವಾಮೀಜಿಗಳಿಗೆ ಅವನ ಆರ್ದ್ರ ಮುಖ ಕಂಡು ಮನ ಕರಗಿ ಸಹಾಯ ಮಾಡಲು ನಿರ್ಧರಿಸಿದರು. ಅನತಿ ದೂರದ ಪೊದೆಯೊಂದನ್ನು ತೋರಿಸಿ ಅದರ ಹಿಂದೆ ಅಡಗಿಕೊಂಡಿರಲು ಹೇಳಿದರು. ವ್ಯಾಪಾರಿ ಅಂತೆಯೇ ಪೊದೆಯ ಹಿಂದೆ ಅಡಗಿಕೊಂಡ. ಈಗ ಸ್ವಾಮೀಜಿಗೆ ತಾಕಲಾಟ ಶುರುವಾಯಿತು.

ಅವನನ್ನು ಅಡಗಿಸಿಟ್ಟಿದ್ದೇನೋ ಸರಿ. ಆದರೆ ಈಗ ಕಳ್ಳರು ಬಂದು ಕೇಳಿದರೆ ಏನೆಂದು ಹೇಳುವುದು? ನಿಜ ಹೇಳಿದರೆ ಪಾಪ, ಈ ವ್ಯಾಪಾರಿಯನ್ನು ದೋಚುತ್ತಾರೆ. ಅವನಿಗೆ ಮೋಸ ಮಾಡಿದಂತಾಗುತ್ತದೆ. ಹೇಳದಿದ್ದರೆ ಇಷ್ಟು ವರ್ಷ ಅನುಷ್ಠಾನ ಮಾಡಿದ ನನ್ನ ಸತ್ಯವನ್ನೇ ನುಡಿಯುವ ವ್ರತಕ್ಕೆ ಚ್ಯುತಿಯುಂಟಾಗುತ್ತದೆ. ಏನು ಮಾಡಲಿ?

ಏನನ್ನೋ ನಿರ್ಧರಿಸಿದ ಸ್ವಾಮಿಗಳು ತಕ್ಷಣ ಅದುವರೆಗೆ ತಾವು ಕುಳಿತಿದ್ದ ಬಂಡೆಯಿಂದ ಎದ್ದು ಅಲ್ಲಿಯೇ ಪಕ್ಕದಲ್ಲಿದ್ದ ಮತ್ತೊಂದು ಬಂಡೆಯ ಮೇಲೆ ಧ್ಯಾನಿಸುತ್ತಾ ಕುಳಿತರು. ಕ್ಷಣಾರ್ಧದಲ್ಲಿ ಆ ಮಾರ್ಗವಾಗಿ ಮೂರು ಜನ ಕಳ್ಳರು ಧಾವಿಸಿ ಬಂದರು. ಇವರನ್ನು ಕಂಡು ನಮಸ್ಕರಿಸಿ... ‘ಸ್ವಾಮೀಜಿ, ಇತ್ತಕಡೆ ಒಬ್ಬ ವ್ಯಾಪಾರಿ ಓಡಿ ಬಂದುದನ್ನು ಕಂಡಿರಾ? ನಿಜ ಹೇಳಿ’ ಎಂದು ಬೆದರಿಸಿದರು.

ಪ್ರೇಮಮಯಿ ಸ್ವಾಮೀಜಿ ಹಸನ್ಮುಖರಾಗಿ ‘ಹೌದೇ? ನೋಡಿ, ನಾನು ಈ ಬಂಡೆಯ ಮೇಲೆ ಕುಳಿತಾಗಿನಿಂದ ನಿಮ್ಮ ಹೊರತು ಯಾರೂ ಈಕಡೆ ಬರಲಿಲ್ಲ’. ಸ್ವಾಮೀಜಿಗಳ ಸತ್ಯಪರತೆ ಆ ಕಳ್ಳರಿಗೆ ಗೊತ್ತಿತ್ತು. ಗತ್ಯಂತರವಿಲ್ಲದೇ ಮುಂದೆ ಹುಡುಕಲು ಹೋದರು. ಸ್ವಾಮೀಜಿ ಸತ್ಯವನ್ನೇ ನುಡಿದಿದ್ದರು. ಅವರು ಹೇಳಿದ್ದಂತೆ, ಅವರು ಬದಲಿ ಬಂಡೆಯ ಮೇಲೆ ಕುಳಿತ ನಂತರ ಆ ಕಳ್ಳರ ಹೊರತಾಗಿ ಯಾರೂ ಬರಲಿಲ್ಲ ಅಲ್ಲವೇ? ಅವರು ಸತ್ಯವನ್ನೇ ನುಡಿದು ವ್ಯಾಪಾರಿಯ ಹಣ, ಪ್ರಾಣ ಎರಡನ್ನೂ ಉಳಿಸಿದ್ದರು.

■